

ಕೆರಾಟೊಕೋನಸ್ನಲ್ಲಿ
ಕಾರ್ನಿಯಾ ತೆಳು ಹಾಗೂ
ಅನಿಯಮಿತವಾಗಿರುತ್ತದೆ.



ಕೇಂದ್ರದ ಎಪಿಥೀಲಿಯಂ ಮತ್ತು
ಸ್ಟ್ರೋಮ ತೆಗೆದುಹಾಕಲಾಗುತ್ತದೆ.



ನಾಟಿ ಸ್ಥಳದಲ್ಲಿ
ಹೊಲಿಯಲಾಗುತ್ತದೆ.

ಕಾರ್ನಿಯಾ
ದೂರವಾಣಿ ಸಂಖ್ಯೆ: 91–80–66121496

ಎನ್.ಎನ್–1
#121/ಸಿ, ಕಾರ್ಡ್ ರಸ್ತೆ, ರಾಜಾಜಿನಗರ, 1ನೇ 'ಆರ್' ಬ್ಲಾಕ್
ಬೆಂಗಳೂರು–560010, ಭಾರತ
ಟೆಲಿಫೋನ್:+91–80–66121643
Email - infonn1@narayananethralaya.com

ಎನ್.ಎನ್–2
ನಾರಾಯಣ ಹೆಲ್ತ್‌ಸಿಟಿ (ನಾರಾಯಣ ಹೃದಯಾಲಯದ ಆವರಣ)
#258/ಎ, ಬೊಮ್ಮಸಂದ್ರ, ಹೊಸೂರು ರಸ್ತೆ
ಬೆಂಗಳೂರು–560099, ಭಾರತ.
ಟೆಲಿಫೋನ್: +91–80–66660655/0658
Email - infonn2@narayananethralaya.com

ಎನ್.ಎನ್–3
#1/1, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, 100 ಅಡಿ ರಸ್ತೆ,
ಇಂದಿರಾನಗರ, ಬೆಂಗಳೂರು–560038, ಭಾರತ
ಟೆಲಿಫೋನ್: +91–80–66974000/01/02
Email - infonn3@narayananethralaya.com

ಎನ್.ಎನ್–4
#63, ರಾಯಲ್ ಮೀನಾಕ್ಷಿ ಮಾಲ್ ಪಕ್ಕ, ಬನ್ನೇರುಘಟ್ಟ ರಸ್ತೆ,
ಹುಳಿಮಾವು ಬೆಂಗಳೂರು–560076, ಭಾರತ
ಟೆಲಿಫೋನ್: +91–80–66121618/1619, +91 9035154170
Email - infonn4@narayananethralaya.com

ಎನ್.ಎನ್–5
ಪ್ಲಾಟ್ 3–ಸಿ, 1ನೇ ಹಂತ, ದೊಡ್ಡೇನಕ್ಕುಂಡಿ ಇಂಡಸ್ಟ್ರಿಯಲ್ ಏರಿಯಾ
ಮಹದೇವಪುರ ಪಿ. ಓ., ಸೀತಾರಾಮಪಾಳ್ಯ ಮೆಟ್ರೋ ನಿಲ್ದಾಣದ ಪಕ್ಕ,
ಬೆಂಗಳೂರು–560048, ಭಾರತ
ಟೆಲಿಫೋನ್: +91–80–66121658/1659
Email - infonn5@narayananethralaya.in

Nnethralaya    Narayananethralaya

www.narayananethralaya.org

ನಮ್ಮ ವೆಬ್‌ಸೈಟ್ ಅನ್ನು ಭೇಟಿ ಮಾಡಲು
ಇಲ್ಲಿ ಸ್ಕ್ಯಾನ್ ಮಾಡಿ

ನಮ್ಮ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸಲು
ಇಲ್ಲಿ ಸ್ಕ್ಯಾನ್ ಮಾಡಿ



# ಡೀಪ್ ಅಂಟಿರಿಯಲ್ ಲ್ಯಾಮೆಲ್ಲರ್ ಕೆರಾಟೋಪ್ಲಾಸ್ಟಿ (ಡಿ.ಎ.ಎಲ್.ಕೆ)

THE BEST EYE HOSPITAL
IN KARNATAKA
RANKED #1 FOR MORE
THAN A DECADE

ONE OF THE
HIGHEST
Google
Reviews
HOSPITAL IN THE WORLD
4.9

CELEBRATING 40 YEARS IN EYE CARE

NARAYANA NETHRALAYA
your faith shall heal you

## ಡೀಪ್ ಆಂಟೀರಿಯರ್ ಲ್ಯಾಮೆಲ್ಲರ್ ಕೆರಾಟೊಪ್ಲ್ಯಾಸ್ಟಿ ಎಂದರೇನು?

ಡೀಪ್ ಆಂಟೀರಿಯರ್ ಲ್ಯಾಮೆಲ್ಲರ್ ಕೆರಾಟೊಪ್ಲ್ಯಾಸ್ಟಿ (DALK) ಒಂದು ಭಾಗಶಃ ದಪ್ಪದ ಕಾರ್ನಿಯಾ ನಾಟಿಯಾಗಿದ್ದು, ಇದರಲ್ಲಿ ಕಾರ್ನಿಯಾದ ಹೊರ ಭಾಗವನ್ನು ಬದಲಾಯಿಸಲಾಗುತ್ತದೆ. ಇದು ರೋಗಿಯ ಒಳಗಿನ ಎಂಡೋಥೀಲಿಯಲ್ ಕೋಶದ ಪದರ ಮತ್ತು ಡೆಸ್ಸೆಮೆಟ್‌ನ ಪೊರೆಯನ್ನು ಸ್ಥಳದಲ್ಲಿ ಬಿಡುತ್ತದೆ. ಕೆರಾಟೊಕೊನಸ್‌ನಂತಹ ಕೆಲವು ಕಾರ್ನಿಯಾ ಪರಿಸ್ಥಿತಿಗಳು ಮತ್ತು ಕಾರ್ನಿಯಾ ಹುಣ್ಣಿನ ನಂತರ ಕಾರ್ನಿಯಾ ಗಾಯಗಳು, ಪ್ರಾಥಮಿಕವಾಗಿ ಕಾರ್ನಿಯಾ ಗಂಟುಗಳ ಮೇಲೆ ಪರಿಣಾಮ ಬೀರುತ್ತದೆ. ಈ ಪರಿಸ್ಥಿತಿಗಳು DALK ಕಾರ್ಯವಿಧಾನದಿಂದ ಹೆಚ್ಚು ಪ್ರಯೋಜನ ಪಡೆಯುತ್ತವೆ.

## ಡಿ.ಎ.ಎಲ್.ಕೆ ಶಸ್ತ್ರಚಿಕಿತ್ಸೆಯನ್ನು ಹೇಗೆ ಮಾಡಲಾಗುತ್ತದೆ?

ಈ ಶಸ್ತ್ರಚಿಕಿತ್ಸೆಯು ತಾಂತ್ರಿಕ ಕೌಶಲ್ಯ ಹೊಂದಿರುತ್ತದೆ. ಹಾಗೂ ಕಾರ್ನಿಯಾದ ಬಹುತೇಕ ಶೇ.95ರಷ್ಟು ದಪ್ಪವನ್ನು ಕತ್ತರಿಸಿ ತೆಗೆಯಲಾಗುತ್ತದೆ. ಅದರಲ್ಲಿ ಅನಾರೋಗ್ಯದ ಮೇಲಿನ ಪದರವನ್ನು ತೆಗೆಯಲಾಗುತ್ತದೆ. ನಂತರ ಮರಣ ಹೊಂದಿದವರಿಂದ ದಾನವಾಗಿ ಪಡೆದ ಕಾರ್ನಿಯವನ್ನು ಆ ಸ್ಥಳದಲ್ಲಿ ಇರಿಸಿ ಹೊಲಿಗೆ ಹಾಕಲಾಗುತ್ತದೆ. ಹೀಗೆ ಹಾಕಿರುವ ಹೊಲಿಗೆಗಳು 12 ರಿಂದ 18 ತಿಂಗಳುಗಳ ಕಾಲ ಉಳಿಯುತ್ತದೆ.

## ಫೆಂಮ್ಟೊಸೆಕೆಂಡ್ ಅಸಿಸ್ಟೆಡ್ ಆಂಟಿರಿಯರ್ ಲ್ಯಾಮೆಲ್ಲರ್ ಕೆರಾಟೊಪ್ಲ್ಯಾಸ್ಟಿ (ಎಫ್.ಎ.ಎಲ್.ಕೆ) ಎಂದರೇನು?

ಈ ಶಸ್ತ್ರಚಿಕಿತ್ಸೆಯಲ್ಲಿ ದಾನವಾಗಿ ಪಡೆದ ಕಾರ್ನಿಯ ಹಾಗೂ ರೋಗಿಯ ಕಾರ್ನಿಯವನ್ನು ಫೆಂಮ್ಟೊಸೆಕೆಂಡ್ ಲೇಸರ್ ಬಳಸಿ ಕತ್ತರಿಸಲಾಗುತ್ತದೆ. ಇದು ಹೊಲಿಗೆ ರಹಿತ ಶಸ್ತ್ರಚಿಕಿತ್ಸೆಯಾಗಿದೆ. ಶಸ್ತ್ರಚಿಕಿತ್ಸೆಯ ನಂತರದ ಅಸ್ಟಿಗ್ಮ್ಯಾಟಿಸಮ್ ಅನ್ನು ಕಡಿಮೆ ಮಾಡುವ ಕಾರ್ಯವಿಧಾನ. ನಂತರ ಮರಣ ಹೊಂದಿದವರಿಂದ ದಾನವಾಗಿ ಪಡೆದ ಕಾರ್ನಿಯವನ್ನು ತೆಗೆದಿರುವ ಸ್ಥಳದಲ್ಲಿ ಇರಿಸಿ ಹೊಲಿಗೆ ಹಾಕಲಾಗುತ್ತದೆ. ಹೀಗೆ ಹಾಕಿರುವ ಹೊಲಿಗೆಗಳು 12 ರಿಂದ 18 ತಿಂಗಳುಗಳ ಕಾಲ ಉಳಿಯುತ್ತದೆ.

## ಈ ಶಸ್ತ್ರಚಿಕಿತ್ಸೆಯ ಪ್ರಯೋಜನಗಳೇನು?

ಈ ಶಸ್ತ್ರಚಿಕಿತ್ಸೆಯಿಂದ ಕಾರ್ನಿಯವನ್ನು ರಕ್ಷಿಸಲಾಗುತ್ತದೆ. ಹೇಗೆಂದರೆ ಕಸಿ ಜೋಡಣೆಯಿಂದ ಅನಾರೋಗ್ಯ ಕಾರ್ನಿಯ ಪದರ ಬದಲಾವಣೆ ಮಾಡಿದುದರಿಂದ ಕಣ್ಣಿನಲ್ಲಿರುವ ನೋವು, ಸೋಂಕನ್ನು ಕಡಿಮೆ ಮಾಡಬಹುದು. ರೋಗಿಯ ಕಣ್ಣಿನ ಹಿಂದಿನ, ಒಳಗಿನ ಕಾರ್ನಿಯ ಪದರ ಚೆನ್ನಾಗಿದ್ದರೆ, ಆಗ ಅದನ್ನು ಸಹ ಸಂರಕ್ಷಿಸಲು ಯೋಗ್ಯವಾಗಿರುತ್ತದೆ. ರೋಗಿಯ ಅನಾರೋಗ್ಯ ಅಥವಾ ದೋಷಯುಕ್ತ ಕಾರ್ನಿಯ ಪದರವನ್ನು ದಾನವಾಗಿ ಪಡೆದ ಕಾರ್ನಿಯ ಪದರಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ಬದಲಾವಣೆ ಮಾಡುವುದರಿಂದ ಕಣ್ಣಿನ ದೃಷ್ಟಿಯ ಸಾಮರ್ಥ್ಯ ಸುಧಾರಿಸುತ್ತದೆ. ಹಾಗೂ ಹಾನಿಗೀಡಾದ ಕಾರ್ನಿಯದ ಜೀವಕೋಶಗಳು ಸಹ ಸುಧಾರಣೆಯಾಗಿ ಕಣ್ಣಿನ ಮೇಲ್ಭಾಗದ ಪದರಗಳು ಸುಧಾರಣೆಯಾಗುತ್ತದೆ. ಕಣ್ಣುಗಳು ಆರೋಗ್ಯವಾಗಿರುವಂತೆ ಕಾಪಾಡುತ್ತದೆ.

## ಈ ಶಸ್ತ್ರಚಿಕಿತ್ಸೆಯಿಂದ ಆಗುವ ತೊಂದರೆಗಳೇನು?

**ಈ ಶಸ್ತ್ರಚಿಕಿತ್ಸೆಯಿಂದ ಆಗುವ ತೊಂದರೆಗಳು ಈ ರೀತಿ ಇವೆ.**

- ಸೋಂಕು ತಗಲುವಿಕೆ.
- ಕಸಿ ಜೋಡಣೆ ಸರಿಯಾಗದೇ ಹೊಂದಾಣಿಕೆಯಾಗದಿರುವಿಕೆ.
- ದೃಷ್ಟಿ ಕಡಿಮೆಯಾಗುವುದು.
- ಕಣ್ಣಿನ ಒಳಗೆ ಒತ್ತಡ ಹೆಚ್ಚಾಗುವಿಕೆ.
- ಕಣ್ಣಿನಲ್ಲಿ ಪೊರೆ ರೂಪುಗೊಳ್ಳುವುದು.
- ಶಸ್ತ್ರಚಿಕಿತ್ಸೆ ವೈಫಲ್ಯವಾಗಿ ಮೂಲ ಸಮಸ್ಯೆ ಮತ್ತೆ ಕಾಣಿಸಿಕೊಳ್ಳುವಿಕೆ.

## ಈ ಶಸ್ತ್ರಚಿಕಿತ್ಸೆಯ ವೇಳೆಯಲ್ಲಿ ಉದ್ಭವಿಸಬಹುದಾದ ತೊಂದರೆಗಳೇನು?

ಶಸ್ತ್ರಚಿಕಿತ್ಸೆಯ ವೇಳೆ ಸಾಮಾನ್ಯವಾಗಿ ಕಂಡುಬರುವ ತೊಂದರೆಗಳೆಂದರೆ ಕಣ್ಣಿನ ಒಳಗಿರುವ ಸೂಕ್ಷ್ಮ ಪದರಗಳಾದ ಡೆಸ್ಸೆಮೆಟ್ಸ್ ಪೊರೆ ಮತ್ತು ಎಂಡೋಥೇಲಿಯಲ್ ಪದರ ಹರಿಯುವಿಕೆ ಅಥವಾ ಛಿದ್ರವಾಗಬಹುದು. ಇದರಿಂದ ಇಡೀ ಕಾರ್ನಿಯಾ ಕಸಿ ಮಾಡುವ ಅಗತ್ಯ ಬೀಳಬಹುದು.

## ಶಸ್ತ್ರಚಿಕಿತ್ಸೆಯ ನಂತರ ಕಾಣುವ ಲಕ್ಷಣಗಳೇನು?

ಶಸ್ತ್ರಚಿಕಿತ್ಸೆಯ ನಂತರ ಕಣ್ಣು ನೋವಿರುತ್ತದೆ. ನೀರು ಸೋರುತ್ತದೆ ಹಾಗೂ ಬೆಳಕಿಗೆ ಹೊಂದಿಕೊಳ್ಳಲು ಕಷ್ಟವಾಗುತ್ತದೆ. ಸ್ಟಿರಾಯ್ಡ್ ಮತ್ತು ಆಂಟಿಬಯೋಟಿಕ್ ಡ್ರಾಪ್‌ಗಳನ್ನು ಬಳಸಲಾಗುತ್ತದೆ. ಅಗತ್ಯವಿದ್ದರೆ ಮುಂದುವರೆಸಬೇಕು. ಒಂದು ವಾರದ ನಂತರ ಕಣ್ಣು ಹೆಚ್ಚು ಆರಾಮದಾಯಕವಾಗಿರುತ್ತದೆ ಮತ್ತು ಸಾಮಾನ್ಯ ಚಟುವಟಿಕೆಗಳು ಮತ್ತು ಶ್ರಮವಿಲ್ಲದ ಕೆಲಸವನ್ನು ಪುನರಾರಂಭಿಸಬಹುದು.

## ಶಸ್ತ್ರಚಿಕಿತ್ಸೆಯಿಂದ ದೀರ್ಘಾವಧಿಯಲ್ಲಿ ಆಗುವ ಬದಲಾವಣೆಯೇನು?

ಕಾರ್ನಿಯಾ ಸಂಪೂರ್ಣವಾಗಿ ಗುಣವಾಗಲು 6 ರಿಂದ 9 ತಿಂಗಳು ಬೇಕಾಗುತ್ತದೆ. ಉತ್ತಮ ದೃಷ್ಟಿ ಪಡೆಯಲು ಕನ್ನಡಕ ಅಥವಾ ಕಾಂಟ್ಯಾಕ್ಟ್ ಲೆನ್ಸ್ ಅಗತ್ಯ. ಪರ್ಯಾಯವಾಗಿ ಲೇಸರ್ ಶಸ್ತ್ರಚಿಕಿತ್ಸೆಯೊಂದಿಗೆ ಕಾರ್ನಿಯಾದ ಹೆಚ್ಚಿನ ಚಿಕಿತ್ಸೆಯಿಂದ ದೃಷ್ಟಿ ಸುಧಾರಿಸಲು ಸಾಧ್ಯವಾಗಬಹುದು.